ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 21–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾಗೋಷ್ಠಿ:<br><br>ಶ್ರೀ. ಆರ್.ವಿ. ದೇಶಪಾಂಡೆ,<br>ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು | 22–11–2014<br>ಶನಿವಾರ<br>ಅಪರಾಹ್ನ<br>12–00 ಗಂಟೆಗೆ | ಕೊಠಡಿ ಸಂಖ್ಯೆ 313<br>ಸಮಿತಿ ಕೊಠಡಿ,<br>ವಿಧಾನ ಸೌದ,<br>ಬೆಂಗಳೂರು. |
| 2 | ರಾಜ್ಯದ ಪರ ಪರಿಸ್ಥಿತಿ ಕುರಿತು ಕೇಂದ್ರ ನಿಯೋಗದ ಸಮೀಕ್ಷೆ ಬಗ್ಗೆ ಪತ್ರಿಕಾಗೋಷ್ಠಿ:<br><br>ಶ್ರೀ ವಿ. ಶ್ರೀನಿವಾಸಪ್ರಸಾದ್,<br>ಕಂದಾಯ ಸಚಿವರು | 22–11–2014<br>ಶನಿವಾರ<br>ಮಧ್ಯಾಹ್ನ<br>1–00 ಗಂಟೆಗೆ | ಕೊಠಡಿ ಸಂಖ್ಯೆ 315<br>ಮೂರನೇ ಮಹಡಿ<br>ವಿಧಾನ ಸೌದ,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ರಾಷ್ಟ್ರೀಯ ಗ್ರಾಹಕರ ಸಪ್ತಾಹ ಆಚರಣೆ

**ಬೆಂಗಳೂರು, 21 ನೇ ನವೆಂಬರ್ (ಕರ್ನಾಟಕ ವಾರ್ತೆ)**

ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಪ್ರಯುಕ್ತ ಈ ಬಾರಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಪ್ತಾಹದ ರೀತಿಯಲ್ಲಿ ಆಚರಿಸಲು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರಾದ ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ ಅವರು ನಿರ್ಣಯ ಕೈಗೊಂಡರು.

ಇಂದು ಆಹಾರ ಆಯುಕ್ತರ ಕಚೇರಿಯಲ್ಲಿ ನಡೆದ ಗ್ರಾಹಕರ ದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಹಲವು ವಿಚಾರಗಳ ಬಗ್ಗೆ ಚರ್ಚಿಸಿದ ಅವರು ಈ ನಿರ್ಣಯವನ್ನು ಕೈಗೊಂಡು ರಾಜ್ಯಮಟ್ಟದ ಕಾರ್ಯಕ್ರಮವನ್ನು ಈ ಬಾರಿ ರಾಜಧಾನಿ ಬೆಂಗಳೂರಿನಿಂದ ಹೊರಗೆ ಆಚರಿಸಲಾಗುವುದು ಎಂದರು.

ಈ ಬಾರಿ ಸಪ್ತಾಹದ ರೂಪದಲ್ಲಿ ಗ್ರಾಹಕರ ಆಚರಿಸುವುದರಿಂದ ಪ್ರತಿದಿನವೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಜಾಗೃತಿ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು, ವಸ್ತುಪ್ರದರ್ಶನ ಮಳಿಗೆಗಳನ್ನು ಆಯೋಜಿಸಲಾಗುವುದು ಎಂದು ಅವರು ತಿಳಿಸಿದರು. ಗ್ರಾಹಕರ ಕುಂದು ಕೊರತೆ ಆಲಿಸಲು ಆಹಾರ ಇಲಾಖೆಯಿಂದ ಬರುವ ವರ್ಷದಿಂದ ಪ್ರತಿ ತಿಂಗಳ ಏಳನೇ ತಾರೀಖಿನಂದು ಆಹಾರ ಅದಾಲತ್‌ನ್ನು ಎಲ್ಲಾ ಜಿಲ್ಲೆಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಪ್ರತಿ ಇಲಾಖೆಯು ಗ್ರಾಹಕರ ಕುಂದು ಕೊರತೆಗಳ ನಿವಾರಣೆಗೆ ಯಾವ ರೀತಿಯಾದ ಪರಿಹಾರ ವೇದಿಕೆಯನ್ನು ರೂಪಿಸಿದೆ ಎನ್ನುವ ಬಗ್ಗೆ ಸಣ್ಣದಾದ ಕೈಪಿಡಿ ತರುವಂತೆ ಸೂಚಿಸಲು ಆಹಾರ ಇಲಾಖೆಯ ಜಂಟಿ ನಿರ್ದೇಶಕರಿಗೆ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಗ್ರಾಹಕರ ರಕ್ಷಣೆಗೆ ಹಾಗೂ ಅವರ ಹಕ್ಕುಗಳ ಕುರಿತು ಅರಿವು ಮೂಡಿಸಲು ಹಾಗೂ ಗ್ರಾಹಕರ ಜಾಗೃತಿ ಚಳುವಳಿಯನ್ನು ಬಲಪಡಿಸಲು ಆಹಾರ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿ ಮಾಡಿದರು. ಗ್ರಾಹಕರಿಗೆ ದೂರು ದಾಖಲು ವ್ಯವಸ್ಥೆಯಲ್ಲಿ ನಂಬಿಕೆ ಹುಟ್ಟಿಸುವ ವ್ಯವಸ್ಥೆ ರೂಪುಗೊಳ್ಳಬೇಕೆಂದು ಶ್ರೀ ವೈ.ಜಿ. ಮುರಳೀಧರ್ ಕೋರಿದರು.

ವಿವಿಧ ಶಾಲೆಗಳಲ್ಲಿ ಗ್ರಾಹಕರ ಕ್ಲಬ್ ಮೂಲಕ ಗ್ರಾಹಕರ ದಿನಾಚರಣೆ ಪ್ರಯುಕ್ತ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುವುದು, ಈ ಬಗ್ಗೆ ಶಿಕ್ಷಣ ಇಲಾಖೆ ನೇತೃತ್ವ ವಹಿಸಬೇಕು ಎಂದು ಇಲಾಖೆಯ ಜಂಟಿ ನಿರ್ದೇಶಕರು ಕೋರಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗ್ರಾಹಕರ ವಿವಿಧ ಕಂಪನಿಗಳ ಪ್ರತಿನಿಧಿಗಳು ಹಾಜರಿದ್ದರು.

ಪಹೊ/ಕೆಎಂ

## ಡ್ರಾಯಿಂಗ್ ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆ

**ಬೆಂಗಳೂರು, 21 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ 2014 ನೇ ಸಾಲಿನಲ್ಲಿ ನಡೆಯುವ ಡ್ರಾಯಿಂಗ್ ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳು ಎಲ್ಲಾ ಡ್ರಾಯಿಂಗ್ ಗ್ರೇಡ್ ಪರೀಕ್ಷಾ ಕೇಂದ್ರಗಳಲ್ಲಿ ನವೆಂಬರ್ 24 ರಿಂದ 26 ರವರೆಗೆ ನಡೆಯಲಿದೆ ಎಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

## LOWER AND HIGHER GRADE DRAWING EXAMINATIONS

Bangalore, Nov. 21 (Karnataka Information)

Lower and Higher grade Drawing Examinations conducted by K.S.E.E.B Bangalore for the year 2014 will be held between 24-11-2014 to 26-11-2014 in all the Examination centres throughout the State says an Press Release by KSEEB.

sm/babu/gpr.

## ಯಶವಂತಪುರದಲ್ಲಿ ಸಾರಿಗೆ ಅದಾಲತ್

**ಬೆಂಗಳೂರು, 21 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಬೆಂಗಳೂರು (ಉತ್ತರ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಯಶವಂತಪುರ, ಬೆಂಗಳೂರು – 560 022 ಇಲ್ಲಿ ನವೆಂಬರ್ 25 ರಂದು ಮಧ್ಯಾಹ್ನ 3–00 ಗಂಟೆಗೆ "ಸಾರಿಗೆ ಅದಾಲತ್" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಈ ಕಚೇರಿಗೆ ಸಂಬಂಧಪಟ್ಟಂತೆ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಿ ಕಾನೂನು ರೀತ್ಯ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುವುದು ಹಾಗೂ ಈ ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಗಳು ಭಾಗವಹಿಸಲಿದ್ದು ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬೆಂಗಳೂರು (ಉತ್ತರ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಸಮ:ಬಾಬು:ಜಿಪಿಆರ್.

## TRANSPORT ADALATH IN YESHWANTHPUR

Bangalore, Nov. 21 (Karnataka Information)

"Transport Adalath" is arranged at the Regional Transport Office, B.B.M.P. Corporation Complex, Yeshwanthpur, Bengaluru (North), on 25-11-2014 at 3.00 PM to hear the grievances of public. The higher officers of Transport Department will be present on the occasion.

Therefore, the public are requested to participate in the programme and get their grievances resolved, says an official press release by RTO, Bengaluru (North).

sm/babu/gpr.

## ಪತ್ರಿಕೋದ್ಯಮ ಪದವೀಧರರಿಗೆ ವೃತ್ತಿ ಕೌಶಲ್ಯ ಹಾಗೂ ನಿರೂಪಣಾ ಕೌಶಲ್ಯ ತರಬೇತಿ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

**ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು 2014-15ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಪತ್ರಿಕೋದ್ಯಮ ಪದವೀಧರರಿಗಾಗಿ, ವೃತ್ತಿ ಕೌಶಲ್ಯ ಹಾಗೂ ನಿರೂಪಣಾ ಕೌಶಲ್ಯ ತರಬೇತಿ ನೀಡುವ ಮೂಲಕ ಪ್ರೋತ್ಸಾಹಿಸುವ ಕಾರ್ಯಕ್ರಮಕ್ಕಾಗಿ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಅರ್ಜಿಗಳು ಬಾರದ ಕಾರಣ, ಅರ್ಜಿಗಳನ್ನು ಸಲ್ಲಿಸಲು ದಿನಾಂಕ 30-11-2014ರವರೆಗೆ ಅವಧಿ ವಿಸ್ತರಿಸಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ (ಹಾಗೂ ಕೆನೆಪದರ ವ್ಯಾಪ್ತಿಗೆ ಒಳಪಡದಂತಹ ಅಭ್ಯರ್ಥಿಗಳು) ಸೇರಿದ, 18 ರಿಂದ 35 ವರ್ಷಗಳೊಳಗಿರುವ ಹಾಗೂ ಕುಟುಂಬದ ವಾರ್ಷಿಕ ಆದಾಯ ರೂ2.5ಲಕ್ಷ ಗಳನ್ನು ಮೀರದಿರುವ (ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರ ಕುಟುಂಬದ ವಾರ್ಷಿಕ ಆದಾಯ ರೂ2.00 ಲಕ್ಷಗಳನ್ನು ಮೀರಿರಬಾರದು) ಪತ್ರಿಕೋದ್ಯಮ/ ವಿದ್ಯುನ್ಮಾನ ಮಾಧ್ಯಮ/ ಸಮೂಹ ಸಂವಹನ ವಿಷಯಗಳಲ್ಲಿ ಕನಿಷ್ಠ ಶೇ. 50ರಷ್ಟು ಅಂಕಗಳನ್ನು ಗಳಿಸಿರುವ ಪದವಿ/ ಸ್ನಾತಕೋತ್ತರ ಪದವೀಧರರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು, ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ಅಭ್ಯರ್ಥಿಗಳು ಪ್ರಸ್ತುತ ಸಾಲಿನಲ್ಲಿ ಇದೇ ಸ್ವರೂಪದ ತರಬೇತಿಯನ್ನು ಸರ್ಕಾರದ ಯಾವುದೇ ಇಲಾಖೆಯಿಂದ ಪಡೆದಿರಬಾರದು. ಅರ್ಜಿಯ ನಿಗದಿತ ನಮೂನೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕೃತ ವೆಬ್‌ಸೈಟ್ www.karnatakavarthe.org ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ದಿನಾಂಕ 30-11-2014 ರೊಳಗಾಗಿ ಸಲ್ಲಿಸಬೇಕು. ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿ ಗೈರುಹಾಜರಾದಲ್ಲಿ ಮೆರಿಟ್ ಆಧಾರದ ಮೇಲೆ ಮುಂದಿನ ಅಭ್ಯರ್ಥಿಗೆ ಅವಕಾಶ ನೀಡಲಾಗುವುದು.

ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ 'ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಂ. 17, ವಾರ್ತಾ ಸೌಧ, ಭಗವಾನ್ ಮಹಾವೀರ್ ರಸ್ತೆ, ಬೆಂಗಳೂರು– 560001, ಅರ್ಜಿ ಹಾಗೂ ದಾಖಲೆಗಳ ಸಾಫ್ಟ್ ಕಾಪಿಯನ್ನು scpinformationdepartment@gmail.com ಗೆ ಇ-ಮೇಲ್ ಮಾಡಬಹುದು.

ಪಹೊ

# ಶೀಘ್ರದಲ್ಲೇ ಅಂತರ ಸಚಿವಾಲಯ ಸಭೆ

**ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)**

ಮರಕ್ಕೆ ಪರ್ಯಾಯವಾಗಿ ಬಳಕೆ ವಸ್ತುಗಳನ್ನು ಉತ್ಪಾದಿಸುವ ನಿಟ್ಟಿನಲ್ಲಿ ಹಾಗೂ ಅರಣ್ಯ ಸಂರಕ್ಷಣೆ ನಿಟ್ಟಿನಲ್ಲಿ ಅತೀ ಶೀಘ್ರದಲ್ಲಿಯೇ ನವದೆಹಲಿಯಲ್ಲಿ ಅಂತರ ಸಚಿವಾಲಯ ಮಟ್ಟದ ಸಭೆ ನಡೆಸಿ ಸೂಕ್ತ ಚರ್ಚೆ ಮತ್ತು ಪರಿಹಾರ ರೂಪಿಸಲಾಗುವುದು ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಶ್ರೀ ಅನಂತಕುಮಾರ್ ಅವರು ತಿಳಿಸಿದರು.

ಅವರು ಇಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗಳ ಸಭಾಂಗಣದಲ್ಲಿ ನಡೆದ ಅಂತರರಾಷ್ಟ್ರೀಯ ಮರದ ವಿಜ್ಞಾನ ಮತ್ತು ತಾಂತ್ರಿಕತೆ ಕುರಿತು ಭವಿಷ್ಯದಲ್ಲಿ ಮರದ ಸದುಪಯೋಗ ಕುರಿತ ಮೂರು ದಿನಗಳ ಸಮ್ಮೇಳನವನ್ನು ಉದ್ಘಾಟಿಸಿ ಮಾಡನಾಡುತ್ತಿದ್ದರು.

ವಿಶ್ವದಲ್ಲಿ ಶೇಕಡ 30 ರಷ್ಟು ಅರಣ್ಯ ಮಾತ್ರ ಉಳಿದಿದೆ. ದೇಶದಲ್ಲಿ ಶೇ. 20 ಭೂ ಪ್ರದೇಶದಲ್ಲಿ ಅರಣ್ಯ ಉಳಿದಿದ್ದು ಉಳಿದಿರುವ ದಾಖಲೆಯಿದೆ. ಆದರೆ ಶೇ. 10 ರಷ್ಟು ಮಾತ್ರ ಸಮರ್ಪಕ ಅರಣ್ಯವಿದ್ದು ಉಳಿದ ಶೇಕಡ "ನಾಮಕಾವಸ್ತೆ" ಅರಣ್ಯವಿದೆ. ಇರುವ ಅರಣ್ಯವನ್ನು ಉಳಿಸಿ ಬೆಳೆಸುವ ಮತ್ತು ಅರಣ್ಯ ಉತ್ಪನ್ನಗಳಿಗೆ ಪರ್ಯಾಯ ಉತ್ಪನ್ನಗಳನ್ನು ಕಂಡು ಹಿಡಿದು ಬಳಕೆಗೆ ಒದಗಿಸುವ ಕಾರ್ಯ ಆಗಬೇಕಿದೆ ಅರಣ್ಯದಲ್ಲಿ ಕಾಡು ಪ್ರಾಣಿಗಳ ಸಂಖ್ಯೆ ಕ್ರಮೇಣ ಇಳಿಮುಖವಾಗಿದೆ ಒಂದು ಲಕ್ಷದಷ್ಟಿದ್ದ ಹುಲಿಗಳು ಈಗ 1700 ಆಗಿದೆ. ರಾಜ್ಯದಲ್ಲಿ ಕೇವಲ 300 ಹುಲಿಗಳಿವೆ 25,000 ದಷ್ಟಿದ್ದ ಆನೆಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ ಅರಣ್ಯ ಮತ್ತು ಅರಣ್ಯ ಉತ್ಪನ್ನ ಹಾಗೂ ಕಾಡು ಪ್ರಾಣಿಗಳನ್ನು ಅಭಿವೃದ್ಧಿಪಡಿಸಬೇಕು ಎಂಬುದು ನೂತನ ಕೇಂದ್ರ ಸರ್ಕಾರದ ಆಶಯವಾಗಿದೆ ಎಂದು ಸಚಿವ ಶ್ರೀ ಅನಂತಕುಮಾರ್ ಅವರು ಹೇಳಿದರು.

ಈ ಅಂತರ ರಾಷ್ಟ್ರೀಯ ಸಮ್ಮೇಳನವು ಯಶಸ್ವಿಯಾಗಿ ಚರ್ಚೆಗಳು ನಡೆದು ಇದರಿಂದ ಹೊರ ಬರುವ ಉತ್ತಮ ಫಲಿತಾಂಶದೊಡನೆ ನವದೆಹಲಿಗೆ ಬಂದರೆ ಅಲ್ಲಿ ಮುಂದಿನ ತಿಂಗಳಲ್ಲಿ ಅಂತರ ಸಚಿವಾಲಯ ಮಟ್ಟದ ಸಭೆ ನಡೆಸಿ ಸೂಕ್ತ ಕಂಡುಕೊಳ್ಳಬಹುದಾಗಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಐಸಿಎಫ್ಆರ್ಇ ಯ ಅಧ್ಯಕ್ಷ ಡಾ: ಅಶ್ವಿನಿಕುಮಾರ್ ಅವರು ವಹಿಸಿದ್ದರು. ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಜಿ.ವಿ. ಸುಗೂರ್ ಸ್ವಾಗತಿಸಿದರು.

ಬಾಬು/ಕೆಎಂ

# ಫಲಿತಾಂಶ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)

ಅಖಿಲ ಭಾರತ ವೃತ್ತಿ ಪರೀಕ್ಷೆ (ಕುಶಲ ಕರ್ಮಿ ತರಬೇತಿ ಯೋಜನೆ) ಫಲಿತಾಂಶವನ್ನು ಸಂಬಂಧಿಸಿದ ಪರೀಕ್ಷಾ ಕೇಂದ್ರದಲ್ಲಿ ನವೆಂಬರ್ 22 ರಂದು ಸಂಜೆ 4–00 ಗಂಟೆಗೆ ಪ್ರಕಟಿಸಲಾಗುವುದು. ಅಂಕಪಟ್ಟಿಗಳನ್ನು ಡಿಸೆಂಬರ್ 20 ರ ನಂತರ ಆಯಾ ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರನ್ನು ಸಂಪರ್ಕಿಸಿ ಪಡೆಯಬಹುದು. ಫಲಿತಾಂಶವನ್ನು ಅಂತರ್ಜಾಲ **www.emptrg.kar.nic.in** ನಲ್ಲಿಯೂ ಪ್ರಕಟಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬಾಬು/ಕೆಎಂ

## ಛಾಯಾಚಿತ್ರ ಶೀರ್ಷಿಕೆ :

ಬೆಂಗಳೂರು ವಾರ್ತಾ ಸೌಧದದಲ್ಲಿಂದು ಸಮುದಾಯ ರೇಡಿಯೋ ನಿರ್ಮಾಣ ಮತ್ತು ನಿರ್ವಹಣೆ ಕೃತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್, ಕೃತಿಯ ಲೋಕಾರ್ಪಣೆ ಮಾಡಿದರು. ಸಮಾರಂಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್, ಬೆಸಿಲ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಶ್ರೀ ಆರ್. ನರಸಿಂಹಸ್ವಾಮಿ ಹಾಗೂ ಅಬ್ದುಲ್ ರೆಹಮಾನ್ ಪಾಷ ಅವರು ಉಪಸ್ಥಿತರಿದ್ದರು.

ಬಾಬು/ಕೆಎಂ

# ಬೆಂಗಳೂರಿನಲ್ಲಿ ವಾಯುಪಡೆ ನೇಮಕಾತಿ ರ್‍ಯಾಲಿ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)

ಭಾರತೀಯ ವಾಯು ಪಡೆಯು ಗ್ರೂಫ್ ಎಕ್ಸ್ ವಿಭಾಗದ ಎಜುಕೇಷನ್ ಇನ್‌ಸ್ಟ್ರಕ್ಟರ್ ಹುದ್ದೆಗಳ ಭರ್ತಿಗಾಗಿ 2014ರ ಡಿಸೆಂಬರ್ 12 ರಂದು ಬೆಂಗಳೂರಿನ ಕಬ್ಬನ್ ರಸ್ತೆಯ ಏರ್‌ಮನ್ ಆಯ್ಕೆ ಕೇಂದ್ರದಲ್ಲಿ ಬೃಹತ್ ನೇಮಕಾತಿ ರ್‍ಯಾಲಿಯನ್ನು ಹಮ್ಮಿಕೊಂಡಿದೆ.

ರಾಜ್ಯದ ಅವಿವಾಹಿತ 22 ವರ್ಷಕ್ಕೆ ಮೇಲ್ಪಟ್ಟ ಪುರುಷ ಅಭ್ಯರ್ಥಿಗಳು ನೇಮಕಾತಿ ರ್‍ಯಾಲಿಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಕನಿಷ್ಠ ಶೇ. 50 ಅಂಕಗಳೊಂದಿಗೆ ಕಲೆ, ವಿಜ್ಞಾನ, ವಾಣಿಜ್ಯ ವಿಭಾಗಗಳಲ್ಲಿ ಪದವಿ ಪಡೆದಿದ್ದು ಬಿ.ಎಡ್., ಪದವಿ ಅಥವಾ ಸರ್ಕಾರದಿಂದ ಮಾನ್ಯತೆ ಹೊಂದಿದ ಶಾಲೆ/ಕಾಲೇಜಿನಲ್ಲಿ ಎರಡು ವರ್ಷಗಳ ಬೋಧನಾ ಅನುಭವ ಅಥವಾ ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಪದವಿ, ಗಣಿತ, ಭೌತಶಾಸ್ತ್ರ, ಕಂಪ್ಯೂಟರ್ ವಿಜ್ಞಾನದಲ್ಲಿ ಎಂ.ಎಸ್.ಸಿ. ಮತ್ತು ಎಂ.ಸಿ.ಎ.ಗಳ ಜೊತೆಗೆ ಬಿ.ಎಡ್., ಪದವಿ ಅಥವಾ ಮಾನ್ಯತೆ ಹೊಂದಿದ ಶಾಲೆ/ಕಾಲೇಜುಗಳಲ್ಲಿ ಎರಡು ವರ್ಷಗಳ ಬೋಧನಾ ಅನುಭವ. ಪದವಿ ಅಭ್ಯರ್ಥಿಗಳು 1991ರ

ಫೆಬ್ರವರಿ 1 ಮತ್ತು 1995 ರ ಮೇ 31 ರ ನಡುವೆ ಹುಟ್ಟಿದವರಾಗಿರಬೇಕು. ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು 1988 ರ ಫೆಬ್ರವರಿ 1 ರಿಂದ 1995 ರ ಮೇ 31 ರ ನಡುವೆ ಜನಿಸಿದವರಾಗಿರಬೇಕು.

ಅರ್ಹ ಅಭ್ಯರ್ಥಿಗಳು ಮೆಟ್ರಿಕ್ಯುಲೇಷನ್ ಉತ್ತೀರ್ಣರಾಗಿರುವ ದಾಖಲೆ ಮತ್ತು ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಪ್ರಮಾಣ ಪತ್ರಗಳ ಮೂಲ ಪ್ರತಿ ಹಾಗೂ ನಾಲ್ಕು ಸ್ವಯಂ ದೃಢೀಕರಿಸಿದ ಪ್ರತಿಗಳು ಹಾಗೂ ಏಳು ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರಗಳೊಡನೆ ಅರ್ಹ ಪರೀಕ್ಷೆಗೆ ಮೇಲ್ಕಂಡ ದಿನದಂದು ನೇಮಕಾತಿ ರ್‍ಯಾಲಿಗೆ ಹಾಜರಾಗಬಹುದು.

ಹೆಚ್ಚಿನ ವಿವರ ಮತ್ತು ಅರ್ಹತೆಗಳಿಗಾಗಿ ಭಾರತೀಯ ವಾಯುದಳದ ಅಂತರ್ಜಾಲ www.indianairforce.nic.in ಅಥವಾ ವಾಯುದಳ ನೇಮಕಾತಿ ಕೇಂದ್ರ ನಂ. 1 ಕಬ್ಬನ್ ರಸ್ತೆ, ಬೆಂಗಳೂರು -560 001 ದೂರವಾಣಿ ಸಂಖ್ಯೆ 080-25592199 ಮಿಂಚಂಚೆ co7asc@dataone.in ಸಂಪರ್ಕಿಸಲು ಅಥವಾ ಆಯಾ ಜಿಲ್ಲೆಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಸಂಪರ್ಕಿಸಲು ಕೋರಿದೆ.

ಬಾಬು/ಕೆಎಂ

## "ಸಮುದಾಯ ರೇಡಿಯೋ" ಸ್ಥಳೀಯ ಮಾಹಿತಿಗೊಂದು ಮಾಧ್ಯಮ ಅಸ್ತ್ರ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)

ಆಯಾ ಸ್ಥಳೀಯ ಜನರಿಗೆ ಸ್ಥಳೀಯ ಮಾಹಿತಿಯನ್ನು ನೀಡಲು ಸಮುದಾಯ ರೇಡಿಯೋ ಇಂದು ಮಾಧ್ಯಮ ಅಸ್ತ್ರವಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್ ಅಭಿಪ್ರಾಯಪಟ್ಟರು.

ಬ್ರಾಡ್‌ಕಾಸ್ಟ್ ಇಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಇಂಡಿಯಾ ಲಿಮಿಟೆಡ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದಲ್ಲಿ ಹೊರತರಲಾಗಿರುವ ಶ್ರೀ ಎಂ. ಅಬ್ದುಲ್ ರೆಹಮಾನ್ ಪಾಷ ಅವರು ಬರೆದಿರುವ "ಸಮುದಾಯ ರೇಡಿಯೋ" ಕಾರ್ಯಕ್ರಮ ನಿರ್ಮಾಣ ನಿರ್ವಹಣೆ" ಎಂಬ ಪುಸ್ತಕವನ್ನು ಲೋಕಾರ್ಪಣೆ ಮಡಿ ಮಾತನಾಡಿದ ಅವರು ಜನರಿಂದ ಜನರಿಗಾಗಿ ಎಂದು ಪ್ರಾರಂಭಿಸಲಾಗಿರುವ ಸಮುದಾಯ ರೇಡಿಯೋಗಳಲ್ಲಿ ಸ್ಥಳೀಯರಿಗೆ ಬೇಕಾದಂತಹ ಮಾಹಿತಿಯನ್ನು ನೀಡಿದರೆ ಖಂಡಿತವಾಗಿಯೂ ಸಮುದಾಯ ರೇಡಿಯೋಗಳು ಯಶಸ್ವಿಯಾಗುತ್ತವೆ ಎಂದರು.

ಸಮುದಾಯ ರೇಡಿಯೋ ಪ್ರಾರಂಭಿಸಲು ಸರ್ಕಾರದ ವತಿಯಿಂದ 10 ಲಕ್ಷ ರೂ.ಗಳ:ನ್ನು ಒದಗಿಸಲಾಗುತ್ತಿದೆ. ರಾಜ್ಯದಲ್ಲಿ ಇದುವರೆವಿಗೆ ಕೇವಲ 9 ಸಮುದಾಯ ರೇಡಿಯೋಗಳು ಮಾತ್ರ ಪ್ರಾರಂಭವಾಗಿದೆ. ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಯುವಕ-ಯುವತಿಯರು ಸಮುದಾಯ ರೇಡಿಯೋ ಪ್ರಾರಂಭಿಸಲು ಮುಂದೆ ಬಂದರೆ ಖಂಡಿತವಾಗಿಯೂ ಸಹಕಾರ ನೀಡಲಾಗುವುದೆಂದರು.

ಕಲಬುರಗಿ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿರುವ ಸಮುದಾಯ ರೇಡಿಯೋ ಮೂಲಕ ಶಿಕ್ಷಕರು ಇಂಗ್ಲೀಷ್ ಮತ್ತು ಗಣಿತ ವಿಷಯಗಳ ಪಾಠವನ್ನು ನಡೆಸಿಕೊಡುವ ಮೂಲಕ ವಿದ್ಯಾರ್ಥಿ ಸಮೂಹವನ್ನು ಆಕರ್ಷಿಸುವಂತೆ ಸಮುದಾಯ ರೇಡಿಯೋಗಳು ಮಕ್ಕಳಿಗೆ, ಮಹಿಳೆಯರಿಗೆ, ರೈತರಿಗೆ ಅನುಕೂಲವಾಗುವ ಮೂಲಕ ಸ್ಥಳೀಯ ಜನರ ಉಪಯುಕ್ತ ಮಾಹಿತಿಗಳನ್ನು ನೀಡುವ ಮೂಲಕ ಮೆಚ್ಚುಗೆಯನ್ನು ಗಳಿಸಬೇಕೆಂದು ತಿಳಿಸಿದರು.

ಸಮುದಾಯ ರೇಡಿಯೋ ಕುರಿತು ಬರೆಯಲಾಗಿರುವ ಪುಸ್ತಕಗಳನ್ನು ಹೊಸ ಮಾಹಿತಿ ತಂತ್ರಜ್ಞಾನವಾದ ಇ-ಬುಕ್‌ನಲ್ಲಿ ಕೂಡ ನೀಡುವ ಮೂಲಕ ಇದರ ಮಾಹಿತಿಯ ಹೆಚ್ಚು ಜನರನ್ನು ಮುಟ್ಟುವಂತೆ ಮಾಡುವುದು ಸೂಕ್ತವೆಂದು ಅವರು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ಶ್ರೀ ಎನ್.ಆರ್. ವಿಶುಕುಮಾರ್ ಅವರು ಮಾತನಾಡಿ ಸಮುದಾಯ ರೇಡಿಯೋಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಮಾಡಲು ಸರ್ಕಾರದ ಹೊಸ ಜಾಹೀರಾತು ನೀತಿಯಡಿ ಜಾಹೀರಾತು ನೀಡಲು ಅವಕಾಶ ಮಾಡಿಕೊಡಲಾಗಿದೆ. ಅಲ್ಲದೆ ಸಧ್ಯದಲ್ಲಿಯೇ ಸಮುದಾಯ ರೇಡಿಯೋ ಕುರಿತ ಮಾಹಿತಿಯುಳ್ಳ 4 ನೇ ಪುಸ್ತಕವನ್ನು ಇಲಾಖೆಯು ಹೊರತರಲಿದೆ ಎಂದರು.

ಕಾರ್ಯಕ್ರಮದಲ್ಲಿ ಲೇಖಕ ಶ್ರೀ ಎಂ. ಅಬ್ದುಲ್ ರೆಹಮಾನ್ ಪಾಷಾ, ಬೆಸಿಲ್‌ನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಆರ್. ನರಸಿಂಹಸ್ವಾಮಿ ಸೇರಿದಂತೆ ಇಲಾಖೆಯ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ವಾರ್ತಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಲಕ್ಷ್ಮೀನಾರಾಯಣ ಅವರು ಸ್ವಾಗತಿಸಿದರು. ಬೆಸಿಲ್ ಮ್ಯಾನೇಜರ್ ಶ್ರೀಮತಿ ಉಷಾಮಂಗಳಗಿ ಅವರು ವಂದಿಸಿದರು.

ಬಾಬು/ಬಿಜೆಪಿ/ಕೆಎಂ